## ಕರ್ನಾಟಕ ಸರ್ಕಾರದ ನಡೆವಳಿಗಳು

**ವಿಷಯ:**– ಶ್ರೀ ಚೆನ್ನಮಲ್ಲಪ್ಪ ರುದ್ರಪ್ಪ .ಕಡಿವಾಳ, ಹಿಂದಿನ ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ, ಹುನಗುಂದ ಹಾಲಿ ಸಹಾಯಕ ಕೃಷಿ ನಿರ್ದೇಶಕರು ರಾಯಚೂರು,ಇವರು ವಿರುದ್ಧ ಲೋಕಾಯುಕ್ತ ಪ್ರಕರಣ

**ಓದಲಾಗಿದೆ:-**

1) ಅಪರ ಪೋಲಿಸ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂ. ಲೋಕ್/ಐಎನ್‌ವಿ(ಜೆ)/ಎಲ್-55/ಸಿಆರ್-9/2007/ಬಿಜಿಕೆಟಿ , ದಿನಾಂಕ: 09-07-2012.

**ಪ್ರಸ್ತಾವನೆ.-**

ಶ್ರೀ ಸಂಗಮೇಶ ಎಂ. ನಾರಾಗಲ್, ಸಾ. ಬೂದಿಹಾಳ್, ಹುನಗುಂದ ತಾಲ್ಲೂಕು. ಬಾಗಲಕೋಟೆ(ಜಿಲ್ಲೆ), ಇವರು ಬಾಗಲಕೋಟೆ ಲೋಕಾಯುಕ್ತದ ಪೋಲಿಸ್ ಠಾಣೆಗೆ ಹಾಜಾರಾಗಿ ನೀಡಿದ ದೂರಿನಲ್ಲಿ ಶ್ರೀ ಎಂ. ಹವಾಲ್ದಾರ. ಜಲಾನಯನ ಅಭಿವೃದ್ಧಿ ಇಲಾಖೆ, ಹುನಗುಂದ, ಕೃಷಿ ಅಧಿಕಾರಿ ಹಾಗೂ ಮತ್ತಿತರ ಅಧಿಕಾರಿಗಳು ಶಾಮೀಲಾಗಿ 2003-04 ರಿಂದ 2006-07ನೇ ಅವಧಿಯಲ್ಲಿ ಬಾಗಲಕೋಟೆ ಜಿಲ್ಲೆಯ, ಹುನಗುಂದ ತಾಲ್ಲೂಕು ವ್ಯಾಪ್ತಿಯಲ್ಲಿಯ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಕೈಗೊಳ್ಳಲಾದ ಕಾಮಗಾರಿಗಳನ್ನು ಕಳಪೆ ಮಟ್ಟದಲ್ಲಿ ಕೈಗೊಂಡಿರುವುದಲ್ಲದೆ ಕೆಲವು ಕಾಮಗಾರಿಗಳನ್ನು ಕೈಗೊಳ್ಳದೇ ಇದ್ದರೂ ಸಹ ಕಾಮಗಾರಿಗಳನ್ನು ಕೈಗೊಂಡಿರುವುದಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಅನುದಾನವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಮತ್ತು ಕಳೆದ ಅನೇಕ ವರ್ಷಗಳಿಂದ ವಿವಿಧ ಹಳ್ಳಿಗಳಲ್ಲಿ ನಿರ್ಮಿಸಿದ ಚೆಕ್ ಡ್ಯಾಂಗಳು, ಕೃಷಿ ಹೊಂಡಗಳು, ಸಮಪಾತಳಿ ಬದುಗಳು, ನಾಲಾಬಂದ್, ಕೆರೆ ಹೂಳು ಎತ್ತುವದು ಮತ್ತು ಹೊಸ ಕೆರೆಗಳನ್ನು ಮಾಡುವುದು ಅಲ್ಲದೇ ಈಗಾಗಲೇ ಇದ್ದ ಕೆರೆಗಳನ್ನು ಪುನಶ್ಚೇತನ ಮಾಡುವ ಕಾಮಗಾರಿಗಳು ಇಲಾಖೆಯ ಅಂದಾಜು ವೆಚ್ಚಕ್ಕೆ ತಕ್ಕಂತೆ ನಡೆದಿರುವುದಿಲ್ಲವೆಂದು, ಹಾಗೂ ಈ ಕಾಮಗಾರಿಗಳಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡಿಲ್ಲವೆಂದು, ತಿಳಿಸಿ, ಈ ಕೆಲಸದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಅಂದಾಜು ರೂ. 50,00,000 ಗಳಷ್ಟು ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ದೂರು ನೀಡಿದ್ದರ ಮೇರೆಗೆ ಬಾಗಲಕೋಟೆ ಲೋಕಾಯುಕ್ತ ಪೋಲಿಸ್ ಠಾಣೆ ಅಪರಾಧ ಸಂ. 9/2007ರಲ್ಲಿ ಕಲಂ 13(1)(ಸಿ) ರೇವು13(2)ಪಿ.ಸಿ. ಆಕ್ಟ್ 1988 ಮತ್ತು 468 ರೇವು34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು

ತನಿಖೆ ನಡೆಸಿದ್ದು, ಸದರಿ ತನಿಖೆಯು ಪೂರ್ಣಗೊಂಡಿದ್ದು, ತನಿಖೆಯಲ್ಲಿ ಈ ಕೆಳಕಂಡ ಅಧಿಕಾರಿ/ನೌಕರರುಗಳು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 13(1)(ಸಿ) ಸಹವಾಚನ 13(2) ಮತ್ತು ಕಲಂ 468 ಸಹವಾಚನ 34ರ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಅಪರಾದ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ತನಿಖಾಧಿಕಾರಿಯವರು ತಿಳಿಸಿ, ಅಂತಿಮಗೊಳಿಸಿದ ತನಿಖೆಯ ದಾಖಲುಗಳ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಗುರಿಪಡಿಸಲು ಅನುಮತಿ ನೀಡುವಂತೆ ಕೋರಿರುತ್ತಾರೆ.

| ಕ್ರ.ಸಂ. | ಅಧಿಕಾರಿ/ನೌಕರರ ಹೆಸರು ಮತ್ತು ಪದನಾಮ<br>ಶ್ರೀ/ಶ್ರೀಮತಿ |
|---|---|
| 1. | ಎಂ.ಬಿ. ಹವಾಲ್ದಾರ್, ಕೃಷಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಹುನಗುಂದ ಬಾಗಲಕೋಟೆ ಜಿಲ್ಲೆ. |
| 2. | ಚೆನ್ನಮಲ್ಲಪ್ಪ ರುದ್ರಪ್ಪ ಕಡಿವಾಳ,<br>ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ ಹುನಗುಂದ ಬಾಗಲಕೋಟೆ ಜಿಲ್ಲೆ. |
| 3. | ಮಾಂತಪ್ಪ ಬಸಪ್ಪ ಹೊಲಗೇರಿ, ಕೃಷಿ ಸಹಾಯಕರು,<br>ಜಲಾನಯನ ಅಭಿವೃದ್ಧಿ ಇಲಾಖೆ ಬಾಗಲಕೋಟೆ, ಜಿಲ್ಲೆ. |
| 4. | ಮನೋಹರ ಹಣಮಂತಪ್ಪ ಭಟ್ಟರ್, , ಕೃಷಿ ಸಹಾಯಕರು,<br>ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಕಚೇರಿ, ಹುನಗುಂದ,<br>ಬಾಗಲಕೋಟೆ ಜಿಲ್ಲೆ. |
| 5. | ಮಲ್ಲಪ್ಪ ಗೂಳಪ್ಪ ಗೂಗಿಹಾಳ, ಕೃಷಿ ಸಹಾಯಕರು,<br>ಜಲಾನಯನ ಅಭಿವೃದ್ಧಿ ಇಲಾಖೆ, ಹುನಗುಂದ, (ನಿವೃತ್ತ) |
| 6. | ಬಸನಗೌಡ ಅಂದಾನಗೌಡ ಪಾಟೀಲ್, ಕೃಷಿ ಸಹಾಯಕರು,<br>ಜಲಾನಯನ ಅಭಿವೃದ್ಧಿ ಇಲಾಖೆ, ಹುನಗುಂದ ಬಾಗಲಕೋಟೆ ಜಿಲ್ಲೆ(ನಿವೃತ್ತ) |
| 7. | ವಿಜಯಕುಮಾರ್ ಹನಮಗೌಡ ಗೌಡರ, ಕಿರಿಯ ಇಂಜಿನಿಯರ್,<br>ಪಂಚಾಯತ್ ರಾಜ್ ಪಿಡಬ್ಲುಡಿ ಉಪ ವಿಭಾಗ ಹುನಗುಂದ<br>ಬಾಗಲಕೋಟೆ ಜಿಲ್ಲೆ. |
| 8. | ಬಸವರಾಜ್ ಶರಣಪ್ಪ ಸುಂಬಡ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಹುನಗುಂದ, ಬಾಗಲಕೋಟೆ ಜಿಲ್ಲೆ. (ನಿವೃತ್ತ) |
| 9. | ಸುರೇಶ ನಿಂಗಪ್ಪ ಗೌಡರ ,ಸಹಾಯಕ ಕಾರ್ಯಪಾಲಕ ಇಂಜೀನೀಯರ್, ಜಿಲ್ಲಾ ಪಂಚಾಯತ್ ರಾಜ್ ಇಂಜನಿಯರಿಂಗ್ ಉಪ ವಿಭಾಗ, ಹುನಗುಂದ ಬಾಗಲಕೋಟೆ ಜಿಲ್ಲೆ. |

ಅಧಿಕಾರಿಗಳನ್ನು ಸಕ್ಷಮ ನ್ಯಾಯಾಲಯದಲ್ಲಿ ವಿಚಾರಣೆಗೆ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19((1)(ಬಿ) ಮತ್ತು ಕಲಂ 197 ಸಿ.ಆರ್.ಪಿ.ಸಿ. ಅನ್ವಯ ಸರ್ಕಾರದ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮುಂದುವರೆದು ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಾಗುತ್ತದೆ.

ಅದೇ ನಿಯಮಾವಳಿಯ ನಿಯಮ-19(1)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯವರ ಸಹಿಯಿಂದ ಅಧಿಕೃತಗೊಳ್ಳಬೇಕು. ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಛೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯವರ ಸಹಿಯ ಅಡಿಯಲ್ಲಿ ದಿನಾಂಕ:30ನೇ ಏಪ್ರಿಲ್ 2013ರಂದು ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

30/4

**(ಮಂಜುನಾಥ ಪಾಟೀಲ್)**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ.**

**ಇವರಿಗೆ:-**

1) ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2) ಶಾಖಾ ರಕ್ಷಾ ಕಡತ/ಹೆಚ್ಚುವರಿ